ದಿನಾಂಕಃ **16.08.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

03. 2 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ 2002 ರಲ್ಲಿ ಖಾತೆಯಾಗಿದೆ ಎಂದು ನಾನು ಹೇಳಿದ್ದು, ಯಾವ ಆಧಾರದ ಮೇಲೆ ಖಾತೆ ನಮೂದಾಗಿತ್ತು? ಎಂದರೆ ಪಾಲುವಿಭಾಗದ ಆಧಾರದ ಮೇಲೆ ಆ ಖಾತೆ ನಮೂದಾಗಿತ್ತು. ಪಾಟೀಲ್ ಗುರುಬಸವನಗೌಡ ಇವರ ಕುಟುಂಬದಲ್ಲಿ ಎಲ್ಲಾ ಪುರುಷರು ಅಂದರೆ ತಂದೆ, ಚಿಕ್ಕಪ್ಪ ಮತ್ತು ದೊಡ್ಡಪ್ಪ ಎಲ್ಲರೂ ಈಗ ಮೃತಪಟ್ಟಿದ್ದಾರೆ ಎಂದರೆ ಸರಿ. ಅವರೆಲ್ಲಾ ಮೃತಪಡುವ ಕಾಲಕ್ಕೆ ವಾದಿಯು ಅಲ್ಪವಯಿ (ಮೈನರ್) ಆಗಿದ್ದ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯ ಅಜ್ಜಿ , ಅತ್ತೆ, ಚಿಕ್ಕಮ್ಮ ಮತ್ತು ದೊಡ್ಡಮ್ಮಂದಿರು ಅವರಿಗೆ ಬೇಕಾದ ಹಾಗೆ ಆಸ್ತಿಗಳ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಪಾಲುವಿಭಾಗ ಪತ್ರದ ಪ್ರಕಾರವೇ ಖಾತೆ ಆಗಿರುತ್ತದೆ. ನಾನು ಹೇಳುತ್ತೇನೆ, ಪಾಲುವಿಭಾಗ ಪತ್ರಕ್ಕೆ ವಾದಿಯ ತಾಯಿ ಮತ್ತು ಅತ್ತೆ ಕೂಡಾ ಸಹಿ ಮಾಡಿದ್ದಾರೆ . ಆ ಪಾಲುವಿಭಾಗ ಆಗುವ ಕಾಲಕ್ಕೆ ನಾನೂ ಕೂಡಾ ಹಾಜರಿದ್ದೇನೇ? ಎಂದರೆ ಊರಿನ ಜನರಿಂದ ಉಮಾ ಪಾಟೀಲ್ ರವರ ಕುಟುಂಬದಲ್ಲಿ ಪಾಲುವಿಭಾಗ ಆಗಿದೆ ಎಂದು ನನಗೆ ಗೊತ್ತಾಯಿತು. ನಾನು ಊರಿನ ಜನರಿಂದ ಪಡೆದ ಮಾಹಿತಿ ಪ್ರಕಾರ ಹೇಳುತ್ತಿದ್ದೇನೆಯೇ ವಿನಃ ಸ್ವಂತ ಮಾಹಿತಿಯಿಂದ ಅಲ್ಲ ಎಂದರೆ ನನಗೆ ಕೂಡಾ ಪಾಲುವಿಭಾಗದ ಬಗ್ಗೆ ಸ್ವಂತ ಮಾಹಿತಿ ಇರುತ್ತದೆ. ವಾದಿಯ ಅಜ್ಜನ ಆಸ್ತಿಗಳ ಬಗ್ಗೆ ಇವತ್ತಿನವರೆಗೆ ಯಾವುದೇ ಪಾಲುವಿಭಾಗ ನಡೆದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ 1 ಮತ್ತು 8 ನೇ ಪ್ರತಿವಾದಿಗಳೊಂದಿಗೆ ಶಾಮೀಲಾಗಿ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಕ್ರಯ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . 2 ನೇ ಪ್ರತಿವಾದಿಗೆ ದಾವಾ ಐಟಂ ನಂ. 11 ರ ಬಗ್ಗೆ ನನಗೆ ಕ್ರಯ ಪತ್ರ ಬರೆದುಕೊಡಲು ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಅವರ ಹೆಸರಿಗೆ ದಾಖಲೆಗಳು ಇರುವುದನ್ನು ನೋಡಿಯೇ ನಾನು ಖರೀದಿ ಮಾಡಿದ್ದೇನೆ.

04. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ ದಿನಾಂಕ 27.05.2017 ರಂದು 2 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ ಪವರ್ ಆಫ್ ಅಟಾರ್ನಿ ಬರೆದುಕೊಡುವ ಸಮಯದಲ್ಲಿ ನಾನೂ ಕೂಡಾ ಹಾಜರಿದ್ದೆ. ಅದಕ್ಕೆ ಸಾಕ್ಷಿಗಳಾಗಿ ತಾಯಮ್ಮ, ನೀಲಮ್ಮ, ಮಂಜುನಾಥ, ಚಿದಾನಂದ ಇವರುಗಳು ಸಹಿಗಳನ್ನು ಮಾಡಿದ್ದಾರೆ. 2 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ ಐಟಂ ನಂ. 6 ನ್ನು ಮಾರಾಟ ಮಾಡಲು ಅವರಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು 12 ನೇ ಪ್ರತಿವಾದಿಗೆ ಐಟಂ ನಂ. 4 ನ್ನು ಮಾರಾಟ ಮಾಡಲು ಅವರಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಐಟಂ ನಂ. 3 ನ್ನು 11 ನೇ ಪ್ರತಿವಾದಿಗೆ ಮಾರಾಟ ಮಾಡಲು ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಸದ್ಭಾವನೆಯಿಂದ ಸೂಕ್ತ ಕ್ರಯದ ಮೊತ್ತ ಪಾವತಿ ಮಾಡಿ ಆಸ್ತಿಗಳನ್ನು ಖರೀದಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ಆಸ್ತಿಗಳ ಬಗ್ಗೆ ಅವುಗಳನ್ನು ಖರೀದಿ ಮಾಡುವ ಮುಂಚೆ ಋಣಭಾರ ಪ್ರಮಾಣ ಪತ್ರಗಳನ್ನು ಪಡೆದು ಪರಿಶೀಲನೆ ಮಾಡಿದ್ದೀರಾ ? ಎಂದರೆ ಮಾಡಿದ್ದೆ. ವಾದಿಯು ತನ್ನ ಅಜ್ಜ ಕೊಟ್ರಗೌಡ ರವರ ಅವಿಭಕ್ತ ಕುಟುಂಬದ ಆಸ್ತಿಗಳ ಬಗ್ಗೆ ಈ ದಾವೆ ಹಾಕಿದ್ದಾರೆ ಎಂದರೆ ಅವರ ಕುಟುಂಬದಲ್ಲಿ ಪಾಲುವಿಭಾಗ ಆದ ನಂತರ ದಾವೆ ಹಾಕಿದ್ದಾರೆ. ವಾದಿಯ ಕುಟುಂಬದಲ್ಲಿ ಇವತ್ತಿನವರೆಗೆ ಯಾವುದೇ ಪಾಲುವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ವಾದಿ ಮತ್ತು 1 ರಿಂದ 8 ನೇ ಪ್ರತಿವಾದಿಗಳ ಜಂಟಿ ಸ್ವಾಧೀನಾನುಭವದಲ್ಲೇ ಎಲ್ಲಾ ದಾವಾ ಸ್ವತ್ತುಗಳು ಇರುತ್ತವೆ ಎಂದರೆ

ಸರಿಯಲ್ಲ. ವಾದಿಯ ಸಮನಾದ ಪಾಲುವಿಭಾಗದ ಹಕ್ಕನ್ನು ಹೊಡೆದುಕೊಳ್ಳಲು ಉಳಿದ ಪ್ರತಿವಾದಿಗಳ ಜೊತೆ ಸೇರಿ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**